*O.S. 61/2014*
*D.W.05*

(ಸಾಕ್ಷಿಯನ್ನು ದಿನಾಂಕ: 26.07.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಬಿ.ಆರ್.ಆರ್., ವಾದಿಗಳ ಪರ ವಕೀಲರಿಂದಃ**

ನಾನು ದಿನಾಂಕಃ 10.06.1965 ರಲ್ಲಿ ಜನಿಸಿರುತ್ತೇನೆ. ಈ ದಾವೆಯನ್ನು ತಿಮ್ಮಯ್ಯ ಸಲ್ಲಿಸಿರುತ್ತಾರೆ. ಅವರು ಮಾರ್ಕೋನಹಳ್ಳಿಯವರು ಇರುತ್ತಾರೆ. ಅವರು ಈ ದಾವೆಯನ್ನು ಕಾಡೇಗೌಡರ ಮಗ ಕೆಂಪಯ್ಯನ ವಿರುದ್ಧ ಸಲ್ಲಿಸಿರುತ್ತಾರೆ. ಕಾಡೇಗೌಡರ ಮಗ ಕೆಂಪಯ್ಯರವರು ಮೊದಲಿಗೆ ಮಾರ್ಕೋನಹಳ್ಳಿ ಗ್ರಾಮಕ್ಕೆ ಬಂದು ಹೋಗುತ್ತಿದ್ದರು. ಅವರು ಬೆಂಗಳೂರಿನ ವಾಸಿ ಇರುತ್ತಾರೆ.

ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ. ವಾದಪತ್ರದಲ್ಲಿರುವ ದಾವಾ ಸ್ವತ್ತು ಈಗಲೂ ಅಸ್ಥಿತ್ವದಲ್ಲಿರುತ್ತದೆ. ದಾವಾ ಸ್ವತ್ತು ಎಂ.ಕೆ.ಕೆಂಪಯ್ಯರವರು ಉಳುಮೆ ಮಾಡುತ್ತಿದ್ದ ಕಾರಣ ಸರ್ಕಾರ ಅವರಿಗೆ ಮಂಜೂರು ಮಾಡಿರುತ್ತದೆ ಎಂದರೆ ಸರಿ. ಉಳುಮೆ ಆಧಾರದ ಮೇರೆಗೆ ಸರ್ಕಾರ ಅವರಿಗೆ ಮಂಜೂರು ಮಾಡಿರುತ್ತದೆ ಎಂದರೆ ಸರಿ. ಎಂ.ಕೆ.ಕೆಂಪಯ್ಯರವರು ಎಂದು ದಾವಾ ಸ್ವತ್ತನ್ನು ಉಳುಮೆ ಮಾಡುತ್ತಿರಲಿಲ್ಲ. ಎಂ.ಕೆ.ಕೆಂಪಯ್ಯನವರ ಪೂರ್ವಜರು ಮಾರ್ಕೋನಹಳ್ಳಿಯವರು ಇರುತ್ತಾರೆ. ಸದರಿ ಎಂ.ಕೆ.ಕೆಂಪಯ್ಯನವರಿಗೆ ಪೂರ್ವಜರ ಆಸ್ತಿ ಕೂಡ ಇತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ಮಂಜೂರಾದಾಗ ನಾನು ಹುಟ್ಟಿರಲಿಲ್ಲ. ಎಂ.ಕೆ.ಕೆಂಪಯ್ಯರವರಿಂದ ಮಾಯಣ್ಣರವರಿಗೆ ಕರಾರು ಪತ್ರ ಆಗಿದೆ ಎಂದು ಮಾಯಣ್ಣರವರು ನನಗೆ ಹೇಳಿದ್ದರು. ಮಾಯಣ್ಣನವರನ್ನು ನಾನು ನೋಡಿರುತ್ತೇನೆ, ಅವರು 25 ರಿಂದ 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ.

ದಾವಾ ಸ್ವತ್ತಿನಲ್ಲಿ 40 ರಿಂದ 50 ವರ್ಷ ವಯಸ್ಸಿನ ತೆಂಗಿನ ಮರಗಳು ಇರುತ್ತವೆ ಎಂದರೆ ಸರಿ. ತಿಮ್ಮಯ್ಯ ಮತ್ತು ಸಹೋದರರು ವಿಭಾಗ ಮಾಡಿಕೊಂಡಾಗ ನಾನು ಸದರಿ

ಪಂಚಾಯಿತಿಯಲ್ಲಿರಲಿಲ್ಲ. ಸದರಿ ವಿಭಾಗ ಮಾಡಿಕೊಂಡಿರುವ ವಿಚಾರವನ್ನು ನನಗೆ ಪ್ರತಿವಾದಿ ತಿಮ್ಮಯ್ಯ ತಿಳಿಸಿರುತ್ತಾರೆ. ಎಂ.ಕೆ.ಕೆಂಪಯ್ಯರವರನ್ನು ಮಾರ್ಕೋನಹಳ್ಳಿಯಲ್ಲಿ ಅಂತ್ಯಕ್ರಿಯೆ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತಿನ ಒಳಗಡೆ ಹೋಗಿ ನೋಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ಯಾವುದೇ ಸಮಾಧಿಗಳಿರುವುದಿಲ್ಲ. ಎಂ.ಕೆ.ಕೆಂಪಯ್ಯರವರು ಕಟ್ಟಿದ್ದ ಮಿಷಿನ್ ಮನೆ ದಾವಾ ಸ್ವತ್ತಿನಲ್ಲಿ ಎಂದೂ ಇರಲಿಲ್ಲ. ತಿಮ್ಮಯ್ಯ ಮತ್ತು ಆತನ ಸಹೋದರರು ವಿಭಾಗ ಆದಾಗ ಯಾರ್ಯಾರಿಗೆ ಎಷ್ಟೆಷ್ಟು ಜಮೀನು ಎಲ್ಲೆಲ್ಲಿ ಬಂದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ಕೆಂಪಯ್ಯ ಕ್ರಯದ ಕರಾರುಪತ್ರ ಮಾಡಿಕೊಟ್ಟಿರುತ್ತಾರೆಂದು ಮಾಯಣ್ಣ ನನಗೆ ತಿಳಿಸಿದ್ದರು. ಎಷ್ಟು ವರ್ಷಗಳ ಹಿಂದೆ ಕ್ರಯದ ಕರಾರುಪತ್ರ ಆಗಿರುತ್ತದೆಂದು ನನಗೆ ಗೊತ್ತಿರುವುದಿಲ್ಲ.

ದಾವಾ ಸ್ವತ್ತು ಕೆಂಪಯ್ಯನಿಗೆ ಮಂಜೂರಾಗುವ ಮುಂಚೆಯಿಂದಲೂ ಮತ್ತು ಕೆಂಪಯ್ಯನವರು ಮೃತಪಡುವವರೆವಿಗೂ ಕೆಂಪಯ್ಯರವರೇ ದವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆಂದು ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಎಂ.ಕೆ.ಕೆಂಪಯ್ಯರವರು ನೆಟ್ಟಿದ್ದ ತೆಂಗಿನ ಮರಗಳು ಈಗಲೂ ದಾವಾ ಸ್ವತ್ತಿನಲ್ಲಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮೂಲ ಮಾಲೀಕರು ಎಂ.ಕೆ.ಕೆಂಪಯ್ಯ ಇರುತ್ತಾರೆ ಎಂದರೆ ಸರಿ. ಎಂ.ಕೆ.ಕೆಂಪಯ್ಯರವರು ಮೃತಪಟ್ಟ ನಂತರ ಆತನ ಮಕ್ಕಳು ದಾವಾ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಎಂ.ಕೆ.ಕೆಂಪಯ್ಯ ಮತ್ತು ತಿಮ್ಮಯ್ಯರವರು ಸಂಬಂಧಿಕರು ಎಂದರೆ ಸರಿ. ಎಂ.ಕೆ.ಕೆಂಪಯ್ಯ ಮತ್ತು ಆತನ ಮಕ್ಕಳು ಬೆಂಗಳೂರಿನಲ್ಲಿ ಕೆಲಸದಲ್ಲಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆದರೆ ಅವರು ಬೆಂಗಳೂರಿನಲ್ಲಿ ವಾಸವಾಗಿದ್ದರು. ಕೆಂಪಯ್ಯನವರು ವ್ಯವಸಾಯ ಮಾಡಲು 1 ನೇ ಪ್ರತಿವಾದಿ ತಿಮ್ಮಯ್ಯ ಮತ್ತು ಆತನ ತಂದೆ ಮಾಯಣ್ಣನ ಸಹಾಯ ಪಡೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಎಂ.ಕೆ.ಕೆಂಪಯ್ಯನವರು ತಿಮ್ಮಯ್ಯನ ಕುಟುಂಬಕ್ಕೆ ದಾವಾ ಸ್ವತ್ತನ್ನು ಎಂದೂ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಾರಾಟದ ಆಧಾರದ ಮೇಲೆ ತಿಮ್ಮಯ್ಯರವರು ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಎಂ.ಕೆ.ಕೆಂಪಯ್ಯ ತೀರಿಕೊಂಡ ನಂತರ ತಿಮ್ಮಯ್ಯರವರು ಎಂ.ಕೆ.ಕೆಂಪಯ್ಯನ ಮಕ್ಕಳು ವ್ಯವಸಾಯ ಮಾಡಲು ತೊಂದರೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಿಮ್ಮಯ್ಯ ನನ್ನ ಸಂಬಂಧಿ ಇರುವುದಿಲ್ಲ. ನಾನು 1 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

**ಸಹಿ/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.